ಪರೀಕ್ಷಿಸಿಕೊಂಡಳು. ಗಾಯವೇನೂ ಆಗಿರಲಿಲ್ಲ. ರಕ್ತ ತನ್ನ ದೇಹದೊಳಗಿಂದ ಬರುತ್ತಿದೆ... ತನಗೇನೋ ಆಗಿದೆ! ಸುಮಿಗೆ ಏನು ಮಾಡಬೇಕೆಂದೇ ತಿಳಿಯಲಿಲ್ಲ. ಕಂಗಾಲಾಗಿ ನಿಂತಿದ್ದಳು. ಕೋಟೆಯಲ್ಲಿ ರಾಕ್ಷಸನಿಂದ ಬಂಧಿಯಾದ ರಾಜಕುಮಾರಿಯಂತೆ ಅನಿಸಿತು. 'ಚೆನ್ನಾಗಿ ಆಡಿದೆ ಸುಮಿ, ಕೀಪ್ ಇಟ್ ಅಪ್' ಧ್ವನಿ ಕೇಳಿ ತಿರುಗಿದಳು. ಜಾಸ್ಮಿನ್ ಮಿಸ್! ಅವರನ್ನು ಕಂಡದ್ದೇ ಸುಮಿಗೆ ಅಳು ಉಕ್ಕಿಬಂತು.

ಜಾಸ್ಮಿನ್ ಮಿಸ್ಸಿಗೆ ಒಂದು ಕ್ಷಣ ಗೊಂದಲವಾದರೂ ಮರುಕ್ಷಣವೇ ವಿಷಯವೇನೆಂದು ಅರಿವಾಯಿತು. ಹತ್ತಿರ ಬಂದು ಸುಮಿಯನ್ನು ಒಮ್ಮೆ ಅಪ್ಪಿಕೊಂಡು, 'ಅರರೆ, ಚಾಂಪಿಯನ್ ಆದವರು ಅಳ್ತಾರೇನೇ? ಇರು ಬಂದೆ' ಎನ್ನುತ್ತಾ ಸ್ಟಾಫ್ ರೂಮಿಗೆ ಹೋಗಿ ನ್ಯಾಪ್ಕಿನ್ಸ್ ಪ್ಯಾಡ್ಸು ತಂದರು. ಅದನ್ನು ಹೇಗೆ ಬಳಸುವುದು ಎನ್ನುವುದನ್ನೂ ಹೇಳಿಕೊಟ್ಟರು. 'ನೀನು ಮುಟ್ಟಾಗಿದ್ದಿಯಾ...ಇದಕ್ಕೆ ಪೀರಿಯಡ್ಸ್ ಅಂತಾರೆ. ಇದು ಸಹಜ ಸುಮಿ. ಎಲ್ಲ ಹುಡುಗಿಯರಿಗೂ ಒಂದು ವಯಸ್ಸಿಗೆ ಬಂದ ಮೇಲೆ ಹೀಗಾಗುತ್ತೆ. ಅದು ಹೆಣ್ಣುದೇಹದಲ್ಲಿ ಆಗಬೇಕಾದ ಬದಲಾವಣೆ. ಹ್ಯಾಪಿ ಬ್ಲೀಡಿಂಗ್ ಹುಡುಗಿ!' ಎಂದು ಮುಗುಳ್ನಕ್ಕರು. ಕಂಗಾಲಾಗಿದ್ದ ಸುಮಿಗೆ ಜಾಸ್ಮಿನ್ ಮಿಸ್ ಮಾತುಗಳು ಸ್ವಲ್ಪ ಸಮಾಧಾನ ನೀಡಿದವು. ಆದರೂ ಭಯ ಆತಂಕ ಹಾಗೇ ಇತ್ತು. ಜಾಸ್ಮಿನ್ ಮಿಸ್ ಕ್ಲಾಸಲ್ಲಿ ಪಾಠ ಮಾಡುವವರ ಹಾಗೆ 'ನೋಡು ಸುಮಿ, ಈ ಮುಟ್ಟು ಯಾಕೆ ಆಗುತ್ತೆ, ಹೇಗೆ ಆಗುತ್ತೆ ಎಂದು ನೀನು ತಿಳಿದುಕೊಂಡರೆ ಭಯ ಹೋಗಿ ಆತ್ಮವಿಶ್ವಾಸ ಬರುತ್ತೆ.... ನಿಂಗೊತ್ತಾ, ಪ್ರಕೃತಿಯು ಗಂಡು, ಹೆಣ್ಣು ದೇಹಗಳನ್ನು ಹೊಸ ಜೀವ ಸೃಷ್ಟಿಗಾಗಿ ಪೂರಕವಾಗಿ ವಿನ್ಯಾಸ ಮಾಡಿದೆ. ಹೆಣ್ಣುಮಕ್ಕಳಲ್ಲಿ ಗರ್ಭಾಶಯ ಇರುತ್ತೆ. ನಿನ್ನ ವಯಸ್ಸಿಗೆ ಬಂದಾಗ ಅಲ್ಲಿ ತಿಂಗಳಿಗೆ ಒಂದು ಅಂಡಾಣು ಬಿಡುಗಡೆ ಶುರುವಾಗುತ್ತೆ. ಮುಟ್ಟು ಎನ್ನುವುದು ಮನುಕುಲವನ್ನು ಮುನ್ನಡೆಸುವ ಜೀವಚಲನೆ. ಹುಡುಗರು ಯುವಕರಾಗುವಾಗ ಅವರಲ್ಲೂ ಬದಲಾವಣೆ ಆಗುತ್ತೆ. ನೀನೀಗ ಮುಟ್ಟಾಗಿರುವುದು ಪ್ರಕೃತಿ ನಿನ್ನಲ್ಲಿ ಹೆಣ್ತನಕ್ಕೆ ಚಾಲನೆ ನೀಡಿರುವ ಸೂಚನೆ. ಪ್ರತಿ ತಿಂಗಳೂ ಬಿಡುಗಡೆಗೊಳ್ಳುವ ಅಂಡಾಣು ಹೀಗೆ ಮುಟ್ಟಿನ ರೂಪದಲ್ಲಿ ಹೊರಹೋಗುತ್ತದೆ. ಭಯಪಡಬೇಕಾಗಿಲ್ಲ. ಸ್ಯಾನಿಟರಿ ಪ್ಯಾಡ್ ಇಟ್ಕೋ. ಅಥವಾ ಅಮ್ಮನ ಹಳೆಯ ಸೀರೆಯ ತುಂಡಾದರೂ ಓಕೆ. ಬಟ್ಟೆಯನ್ನು ವಾಶ್ ಮಾಡಿ ಚೆನ್ನಾಗಿ ಒಣಗಿಸಿಕೊಳ್ಳಬೇಕು...ಮತ್ತೆ ನೀನೀಗ ಪೌಷ್ಟಿಕ ಆಹಾರ ತಗೋಬೇಕು, ತಿಳೀತಾ? ನಾಳೆ ಸ್ಟೋರಿ ಕ್ಲಾಸ್ ಮುಗಿದ ನಂತರ ಹುಡುಗಿಯರಿಗೆಲ್ಲ ಈ ಬಗ್ಗೆ ಡಿಟೇಲ್ ಆಗಿ ತಿಳಿಸ್ತೇನೆ. ಬಾಬಾ..ಎಲ್ರೂ ಚಿಗರೆಮರಿ ಸುಮಿ ಪ್ರೈಜ್ ತಗೊಳ್ಳೋದನ್ನು ಕಾಯ್ತಿದ್ದಾರೆ' ಎಂದರು.

ಸುಮಿ ಹಗುರಾಗಿ ಜಾಸ್ಮಿನ್ ಮಿಸ್‌ರನ್ನು ಹಿಂಬಾಲಿಸಿದರೂ ಅವಳ ನಡಿಗೆಗೆ ಎಂದಿನಂತೆ ನೆಗೆಯುವ ಲಯ ಇರಲಿಲ್ಲ. ಹೊರಗೆ ಹೊಸತೇ ಜಗತ್ತು ಎದುರಾಯಿತು. ಸ್ಕೂಲ್ ಪ್ಲೇಗ್ರೌಂಡು ಗಾರ್ಡನ್ನು ದಾಟಿ ಸ್ಟೇಜಿನತ್ತ ನಿಧಾನವಾಗಿ ಹೆಜ್ಜೆಯಿಟ್ಟಳು. ಮಕ್ಕಳು, ಶಿಕ್ಷಕರು, ಅಂಪೈಯರು, ಅತಿಥಿಗಳು ಎಲ್ಲರೂ ತನ್ನನ್ನೇ ಗಮನಿಸುತ್ತಿದ್ದಾರೆ ಅನಿಸಿತು. ಸಣ್ಣ ನಾಚಿಕೆಯೊಂದು ಅವಳನ್ನು ಅಲಂಕರಿಸಿತ್ತು. ಈ ರಮಿತನಾದರೂ ಸೈಕಲ್ ಮೇಲೆ ಈ ಕ್ಷಣದಲ್ಲಿ ತನ್ನನ್ನು ದೂರ ಎಲ್ಲಾದರೂ ಕರೆದೊಯ್ಯಬಾರದೇ ಅನಿಸಿತು. ಸುಮಿ ಹೀಗೆ ಯೋಚನೆಗಳಲ್ಲಿ ಮುಳುಗಿರುವಾಗಲೇ ಅವಳ ಹೆಸರನ್ನು ಮೈಕಲ್ಲಿ ಕೂಗಿದರು. ಸಾಮಾನ್ಯವಾಗಿ ಎರಡೆರಡು ಮೆಟ್ಟಿಲುಗಳನ್ನು ಜಂಪ್ ಹೊಡೆಯುತ್ತಿದ್ದ ಸುಮಿ ಈಗ ಒಂದೊಂದೇ ಮೆಟ್ಟಲೇರಿ ಸ್ಟೇಜಿಗೆ ಬಂದಳು. ಚಪ್ಪಾಳೆಗಳ ನಡುವೆ ಶೀಲ್ಡ್ ಪಡೆಯುವಾಗ ಒಮ್ಮೆ ಸುತ್ತಲೂ ಕಣ್ಣಾಡಿಸಿದರೂ ಹಾಳಾದವನು ರಮಿತ ಮಾತ್ರ ಕಾಣಲೇ ಇಲ್ಲ. ಅವನು ರಾಜಕುಮಾರ ಅಲ್ಲ ರಾಕ್ಷಸ ಎಂದು ಬೈದುಕೊಂಡಳು!

ಆದರೆ ಅವನು ಸರಿಯಾದ ಸಮಯಕ್ಕೇ ಪ್ರತ್ಯಕ್ಷನಾಗಿದ್ದ. ಶೀಲ್ಡ್ ಹಿಡಿದು ಮನೆ ದಾರಿ ಹಿಡಿದಾಗ ಹೀರೋ ಥರ ಸುಂಯ್ ಅಂತ ಬಂದವನು ಇವಳ ಪಕ್ಕದಲ್ಲೇ ಬ್ರೇಕ್ ಹಾಕಿ ಸೈಕಲ್ಲು ನಿಲ್ಲಿಸಿ, 'ಓ ಚಾಂಪಿಯನ್ ನಾಗರಹಾವೇ, ಬಾ ಕೂತ್ಕೋ' ಎಂದ. ಒಮ್ಮೆಲೇ ಬೆಚ್ಚಿ ಬೀಳಿಸಿದ್ದಕ್ಕೆ ಸಿಟ್ಟು ಬಂದರೂ ಕ್ಷಣಾರ್ಧದಲ್ಲಿ ಅದು ಕರಗಿ ಸೈಕಲ್ ಏರಲು ತಯ್ಯಾರಾದಳು. 'ಬಾ, ಮುಂದೇ ಕೂತ್ಕೋ, ಕನಸು ಕಂಡರೆ ನಂಗೂ ಗೊತ್ತಾಗ್ಲಿ' ಎಂದ. ಎದುರು ಕೂತಾಗ ಅವಳು ಅವನಿಗೆ ಇನ್ನಷ್ಟು ಹತ್ತಿರವಾದಳು. ಹೆದ್ದಾರಿ ಬಿಟ್ಟು ಊರಿನತ್ತ ಸೈಕಲ್ಲು ಸಮೀಪಿಸುವಾಗ ದಾರಿಯಲ್ಲಿ ಚಿಕ್ಕಚಿಕ್ಕ ಹೂಗಳು ಬೆಳಗ್ಗೆ ಚೆಲ್ಲಿದ ಸಕ್ಕರೆ ಕಾಳುಗಳಿಂದಲೇ ಅರಳಿದ್ದು ಅನಿಸಿತು. ಕಥೆಯ ರಾಜಕುಮಾರಿ ಚೆಲ್ಲಿದ ಒಂದೊಂದೇ ಮುತ್ತು